# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಹೆಚ್.ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 177

ಉತ್ತರಿಸಬೇಕಾದ ದಿನಾಂಕ : 16.02.2022.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಗೋಶಾಲೆಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು ) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಗೋಶಾಲೆಗಳ ಸಂಖ್ಯೆ: **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ | ದೇಸಿ ತಳಿಗಳ ಸಂರಕ್ಷಣೆಗೆ ಸರ್ಕಾರದಿಂದ ಪ್ರಸ್ತುತ ಇರುವ ಯೋಜನೆಗಳು ಯಾವುವು; (ವಿವರ ನೀಡುವುದು) | 1. **ಸಮಗ್ರ ಗೋ ಸಂಕುಲ ಸಮೃದ್ಧಿ:** ನಮ್ಮ ರಾಷ್ಟ್ರದ ಇತರ ರಾಜ್ಯದ ತಳಿಗಳಾದ ಗಿರ್, ಸಾಹಿವಾಲ್, ಥಾರ್ ಪಾರ್ಕರ್, ಓಂಗೋಲ್ ತಳಿಗಳ ಹಾಗೂ ದೇವಣಿ ತಳಿಗಳನ್ನು ರಾಜ್ಯದಲ್ಲಿ ಅಭಿವೃದ್ಧಿಗೊಳಿಸಲು ಅನುವಾಗುವಂತೆ ಇಲಾಖಾ ಕ್ಷೇತ್ರಗಳಾದ ಕಡಸು ಉತ್ಪಾದನಾ ಕೇಂದ್ರ, ಬರ್ಗಿ, ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ ಹಾಗೂ ಮುನಿರಾಬಾದ್ ಕ್ಷೇತ್ರಗಳಲ್ಲಿ ಪ್ರತಿ ತಳಿಯ 20 ಹಸುಗಳನ್ನು ಸಾಕಾಣಿಕೆ ಮಾಡಿ ಅವುಗಳಿಂದ ಜನಿಸುವ ಗಂಡು ಕರುಗಳನ್ನು ವೀರ್ಯ ಉತ್ಪಾದನೆಗೆ ಬಳಸಿಕೊಂಡು ಈ ತಳಿಗಳ ಸಂರಕ್ಷಣೆಗೆ ಅನುವಾಗುವಂತೆ **"ಸಮಗ್ರ ಗೋ ಸಂಕುಲ ಸಮೃದ್ಧಿ"** ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>2. **ಅಮೃತಸಿರಿ:** ಇಲಾಖೆಯ ಎಲ್ಲಾ ಜಾನುವಾರು ಕ್ಷೇತ್ರಗಳಲ್ಲಿ ಹುಟ್ಟುವ ಹೆಚ್ಚುವರಿ ಹೆಣ್ಣು ಕರುಗಳನ್ನು / ಕಡಸುಗಳನ್ನು / ಹಸುಗಳನ್ನು **"ಅಮೃತಸಿರಿ"** ಯೋಜನೆ ಎಂಬ ನಾಮಕರಣದೊಂದಿಗೆ ಜಾನುವಾರು ಕ್ಷೇತ್ರಗಳ ವ್ಯಾಪ್ತಿಯ ಜಿಲ್ಲೆಯ ರೈತರಿಗೆ / ದೇವದಾಸಿಯರಿಗೆ / ವಿಧವೆಯರಿಗೆ/ WarWidows / ಶವಸಂಸ್ಕಾರ ಕಾರ್ಮಿಕರಿಗೆ ಪುಸ್ತಕ ಬೆಲೆಯ ಶೇ.25 ರಂತೆ ಷರತ್ತು ಮತ್ತು ನಿಬಂಧನೆಗಳೊಂದಿಗೆ ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಆ ಮೂಲಕ ರೈತರು ಹೆಚ್ಚು ಹೆಚ್ಚು ದೇಶಿ ತಳಿಯ ಹಸುಗಳ ಸಾಕಾಣಿಕೆ ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ. |

| | | |
|---|---|---|
| | | 3. **ಅಮೃತಧಾರೆ–** ಇಲಾಖೆಯ ಜಾನುವಾರು ಕ್ಷೇತ್ರಗಳಲ್ಲಿ ಜನಿಸುವ ಗಂಡು ರಾಸುಗಳನ್ನು ಆಯಾ ತಳಿಯ ಸಂವರ್ಧನಾ ಹಿಂಡು (Breeding Tract) ಹಾಗೂ ಕಳೆದ 5 ವರ್ಷಗಳಿಂದ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಹೋರಿಗಳನ್ನು ಖರೀದಿಸಿರುವ ತಾಲ್ಲೂಕಿನ ರೈತರುಗಳಿಗೆ ಷರತ್ತು ಮತ್ತು ನಿಬಂಧನೆಗಳೊಂದಿಗೆ ಹೋರಿ ಕರುಗಳನ್ನು ನೀಡುವ ಯೋಜನೆಯನ್ನು ಜಾರಿ ಮಾಡಲಾಗಿದೆ. ಆ ಮೂಲಕ ಉತ್ತಮ ತಳಿಯ ಬೀಜದ ಹೋರಿಗಳು ದೊರೆಯುವುದರಿಂದ ದೇಶೀ ತಳಿ ಅಭಿವೃದ್ಧಿಗೆ ಸಹಕಾರಿಯಾಗಿರುತ್ತದೆ.<br><br>**ಕೃತಕ ಗರ್ಭಧಾರಣಾ ಕಾರ್ಯಕ್ರಮ:** ದೇಶಿ ತಳಿಗಳಾದ ಅಮೃತ್ ಮಹಲ್, ಹಳ್ಳಿಕಾರ್, ಮಲ್ನಾಡ್ ಗಿಡ್ಡ, ಖಿಲಾರ್, ಕೃಷ್ಣವ್ಯಾಲಿ, ದೇವಣಿ, ಗಿರ್, ಥಾರ್ ಪಾರ್ಕರ್, ಸಾಹಿವಾಲ್, ಸುರ್ತಿ ಮತ್ತು ಮುರ್ರಾ ತಳಿಯ ಹೋರಿಗಳನ್ನು ರಾಜ್ಯದ 4 ವೀರ್ಯ ಉತ್ಪಾದನಾ ಕೇಂದ್ರಗಳಲ್ಲಿ ಸಾಕಾಣಿಕೆ ಮಾಡಿ ಅವುಗಳಿಂದ ವೀರ್ಯ ಉತ್ಪಾದನೆ ಮಾಡಿ ಇಲಾಖೆಯ ಪಶುವೈದ್ಯಕೀಯ ಸೇವಾ ಸಂಸ್ಥೆಗಳ ಮೂಲಕ ಕೃತಕ ಗರ್ಭಧಾರಣಾ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಆ ಮೂಲಕ ದೇಶೀ ತಳಿಗಳ ಸಂರಕ್ಷಣೆ ಕೈಗೊಳ್ಳಲಾಗುತ್ತಿದೆ. |
| ಇ | ಗೋವಿನ ಉತ್ಪನ್ನಗಳ ತರಬೇತಿ ಮತ್ತು ಮಾರಾಟದ ಬಗ್ಗೆ ಹಾಲಿ ಇರುವ ಸರ್ಕಾರದ ಯೋಜನೆಗಳಾವುವು? ಮಾಹಿತಿ ನೀಡುವುದು) | ಗೋವಿನ ಉತ್ಪನ್ನಗಳ ತರಬೇತಿ ಮತ್ತು ಮಾರಾಟದ ಬಗ್ಗೆ ಕಾರ್ಯಕ್ರಮ ರೂಪಿಸಲಾಗುತ್ತಿದೆ. |

**ಪಸಂಮೀ ಇ–19 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ- 1

| ಕ್ರ.ಸಂ | ಗೋಶಾಲೆಯ ವಿವರ | ಹಸುಗಳ ಸಂಖ್ಯೆ | ಷರಾ |
|---|---|---|---|
| 1 | ಶ್ರೀ ಕೃಷ್ಣ ಗೋಶಾಲೆ (ದೊಡ್ಡ ಗುಬ್ಬಿ) | 326 | |
| 2 | ನಂದಿ ಗೋಶಾಲೆ, ಪುರಂದರಪಾಳ್ಯ, ಬೆಂಗಳೂರು ದಕ್ಷಿಣ ತಾಲ್ಲೂಕು. | 50 | |
| 3 | ವಾಟ್ಸ್ ಫೌಂಡೇಶನ್ , ಪಟ್ಟಣಗೆರೆ, ಬೆಂಗಳೂರು ದಕ್ಷಿಣ ತಾಲ್ಲೂಕು. | 90 | |
| 4 | ಬಾಲಾಜಿ ಗೋಶಾಲೆ ಟ್ರಸ್ಟ್, ಜವರೇಗೌಡನ ದೊಡ್ಡಿ. ಬೆಂ.ದ,ತಾ. | 42 | |
| 5 | ರಾಜರಾಜೇಶ್ವರಿ ದೇವಸ್ಥಾನ ಟ್ರಸ್ಟ್, ಆರ್. ಆರ್. ನಗರ,ಬೆಂ.ದ,ತಾ. | 85 | |
| 6 | ಬಿ.ಜಿ.ಎಸ್.ಗೋಶಾಲೆ,ಬೆಂ.ದ.ತಾ. | 89 | |
| 7 | ಶ್ರೀ ಶ್ಯಾಂ ಗೋಶಾಲೆ, ಬೆಂ.ದ.ತಾ | 70 | |
| 8 | ಶ್ರೀ ಶ್ರೀನಿವಾಸ ಸಾಲಿ ಗ್ರಾಮ ದೇವಸ್ಥಾನ ಗೋಶಾಲೆ, ಬೆಂ/ದ.ತಾ. | 20 | |
| 9 | ಶ್ರೀ ಮದ್ವ ನಾರಾಯಣ ಆಶ್ರಮ ಟ್ರಸ್ಟ್, ಬೆಂ.ದ.ತಾ. | 46 | |
| 10 | ಶ್ರೀ ಸುಬ್ರಮಣ್ಯ ಸೇವಾ ಟ್ರಸ್ಟ್ ಗೋಶಾಲೆ, ರಾಮೋಹಳ್ಳಿ, ಬೆಂ.ದ.ತಾ. | 28 | |
| 11 | ಶ್ರೀ ಭಾರತಿ ಟ್ರಸ್ಟ್, ಗೋಶಾಲೆ, ರಾಮೋಹಳ್ಳಿ, ಬೆಂ.ದ.ತಾ. | 10 | |
| 12 | ಗೋಲೋಕ ಧರ್ಮ ಟ್ರಸ್ಟ್, ಬೆಂ.ದ.ತಾ. | 550 | |
| 13 | ಶೃಂಗೇರಿ ಶಾರದಾ ಪೀಠ ಗೋಶಾಲೆ, ಬೆಂ.ದ.ತಾ | 60 | |
| 14 | ರಿಷಬ್ ಕಾಮದೇನು ಗೋಶಾಲೆ, ಬೆಂ.ದ.ತಾ. | 64 | |
| 15 | ಕರ್ನಾಟಕ ಪ್ರಾಣಿ ದಯಾ ಸಂಘ, ಬೆಂ.ದ.ತಾ. | 973 | |
| 16 | ಶ್ರೀ ಗೋರಕ್ಷಣಾ ಗೋಶಾಲೆ, ಗರುಡಾಚಾರ್ ಪಾಳ್ಯ, ಬೆಂ.ಪೂ.ತಾ. | 900 | |
| 17 | ಜಗದ್ಗುರು ಶಿವರಾಜೇಶ್ವರ ದೇಸೀ ಕೇಂದ್ರ ಸ್ವಾಮಿ ಆಶ್ರಮ | 06 | |
| 18 | ನಾಟಿ ಹಸು ಗೋಶಾಲೆ, ಕಾಕೋಳು, | 225 | |
| 19 | ಸದ್ಗುರು ಸದ್ಬಲ್ ಆದ್ರಶ ಗೋಶಾಲೆ, ಸೀತಕೆಂಪನಹಳ್ಳಿ, | 16 | |
| 20 | ವೇಣುಗೋಪಾಲಸ್ವಾಮಿ ಗೋರಕ್ಷಣಾ ಸೇವಾ ಟ್ರಸ್ಟ್( ಲಿಂಗರಾಜಪುರಂ. | 53 | |
| 21 | ಇಸ್ಕಾನ್ ಗೋಶಾಲೆ, ಕಾಚರಕಹಳ್ಳಿ, (ಹೆಣ್ಣೂರು) | 60 | |
| 22 | ರವಿಶಂಕರ್ ಗುರೂಜಿ ಗೋಶಾಲೆ, | 924 | |
| 23 | ರಂಗನಾಥ್ ಗೌಡಿಯಾ ಗೋಶಾಲೆ. | 60 | |
| 24 | ಅಮೃತಧಾರಾ ಗೋಶಾಲೆ, ಕಗ್ಗಲೀಪುರ, ಬೆಂಗಳೂರು ದಕ್ಷಿಣ, | 400 | |
| 25 | ಉದಾಸೀನ್ ಮಠ ಮತ್ತು ಗೋಶಾಲೆ, | 46 | |